ಬರೀ ಇಷ್ಟೇ ಆಗಿದ್ದರೆ ಈ ಸಿನಿಮಾ ಮತ್ತೊಂದು 'ಥ್ರಿಲ್ಲರ್' ಆಗಿ ಜನಮಾನಸದಿಂದ ಎಂದೋ ಮರೆಯಾಗಿರುತ್ತಿತ್ತು. ಈ ರೋಚಕ ಕತೆಯೊಂದಿಗೆ ನಿರ್ದೇಶಕ ಮತ್ತೊಂದು ಆಯಾಮವನ್ನು ತರುತ್ತಾರೆ. ಈ ಮೂವರಲ್ಲಿ ಒಬ್ಬ 'ಒಳ್ಳೆಯವ' (The Good), ಮತ್ತೊಬ್ಬ 'ಕೆಟ್ಟವ' (The Bad), ಇನ್ನೊಬ್ಬ 'ಅಸಹ್ಯದವ' (The Ugly). ಮೂವರಲ್ಲಿಯೂ ಮನುಷ್ಯರ ಮೂರು ವಿಭಿನ್ನ ಗುಣಗಳನ್ನು ಪ್ರತಿಷ್ಠಾಪಿಸಿ, ಅವರನ್ನು ಆ ಗುಣಗಳಿಗೆ ಸಂಕೇತಗೊಳಿಸಿ, ಆ ಗುಣಗಳು ಬದುಕಿನಲ್ಲಿ ಯಾವ ಸ್ಥಾನವನ್ನು ಪಡೆಯಬೇಕು ಎನ್ನುವ ಅಧ್ಯಾತ್ಮದ ಎಳೆಯನ್ನೂ ಕತೆಯಲ್ಲಿ ತಂದು ಬಿಟ್ಟಿದ್ದಾರೆ ನಿರ್ದೇಶಕ. ಆದ್ದರಿಂದ ಕತೆಯ ಅಂತ್ಯ ಕೇವಲ ಯಾರು ಹಣವನ್ನು ದಕ್ಕಿಸಿಕೊಂಡರು ಎನ್ನುವುದು ಅಲ್ಲವೇ ಅಲ್ಲ. ಈ ಮೂರು ಮಾನವ ಗುಣಗಳಲ್ಲಿ ಯಾವುದಕ್ಕೆ ಜಯ, ಯಾವುದಕ್ಕೆ ಅಪಜಯ, ಯಾವುದಕ್ಕೆ ತ್ರಿಶಂಕು ಸ್ಥಿತಿ ಎನ್ನುವ ವಿಶೇಷ ತರ್ಕವನ್ನು ಕತೆ ಮನಸ್ಸಿಗೆ ನಾಟುವಂತೆ ತೋರಿಸಿಕೊಡುತ್ತದೆ.

ಈ ಸಿನಿಮಾದಲ್ಲಿ ಹತ್ತು ನಿಮಿಷಕ್ಕೂ ಹೆಚ್ಚಿನ ಮಾತಿಲ್ಲದ ದೃಶ್ಯಗಳಿವೆ. ಸಿನಿಮಾದ ಆರಂಭ ಮತ್ತು ಅಂತ್ಯವೆರಡರಲ್ಲೂ ಈ ವಿಳಂಬಿತ ಮೌನ ದೃಶ್ಯಗಳಿವೆ. ವಿಶೇಷವೆಂದರೆ ಅವೇ ಈ ಸಿನಿಮಾದ ಹೈಲೈಟ್! ಇವು ನಿರ್ದೇಶಕನ ನಿರೂಪಣಾ ಸಾಮರ್ಥ್ಯವನ್ನು ಪ್ರಮಾಣೀಕರಿಸುತ್ತವೆ. ಅತ್ಯಂತ ದೂರ ಮತ್ತು ಅತೀ ಸಮೀಪಕ್ಕೆ ಕ್ಯಾಮರಾ ಕೊಂಡೊಯ್ಯುತ್ತಾ ಹೇಳುವ ಕತೆಗಾರಿಕೆಗೆ ತನ್ನದೇ ಅನನ್ಯತೆ ದಕ್ಕಿ ಬಿಟ್ಟಿದೆ. ದೃಶ್ಯಗಳು ಮನಸ್ಸಿನಲ್ಲಿ ಅಚ್ಚಳಿಯದೆ ನಿಂತು ಬಿಡುವಷ್ಟು ಛಾಯಾಗ್ರಹಣ ಪರಿಪಕ್ವವಾಗಿದೆ.

ಮೂವರು ನಾಯಕರನ್ನು ಆರಂಭದಲ್ಲಿ ಪರಿಚಯ ಮಾಡಿಕೊಡುವ ನಿರೂಪಣೆಯೇ ಮೈನವಿರೇಳಿಸುತ್ತದೆ. ಮಾತಿಲ್ಲದ ಈ ದೃಶ್ಯಗಳಲ್ಲಿ, ಬರೀ ಸಂಗೀತ ಮತ್ತು ದೃಶ್ಯದ ಮೋಡಿಯೇ ತುಂಬಿದೆ. ಪ್ರತಿ ನಾಯಕನೂ ಮೂರು ಜನರನ್ನು ಶೂಟ್ ಮಾಡಿ ಕೊಂದು ತನ್ನ ಗುಣವನ್ನು ಸಾಬೀತು ಪಡಿಸುವ ತಂತ್ರವನ್ನು ಇಲ್ಲಿ ಅಳವಡಿಸಿಕೊಳ್ಳಲಾಗಿದೆ. ಮೂವರು ಅಮಾಯಕರನ್ನು ಕೊಂದೇ ಪ್ರವೇಶ ಗಳಿಸುವ ಈ ಮೂವರು ಅಪರಾಧಿಗಳಲ್ಲಿ ಒಬ್ಬ 'ಒಳ್ಳೆಯವ', ಇನ್ನೊಬ್ಬ 'ಕೆಟ್ಟವ', ಮತ್ತೊಬ್ಬ 'ಅಸಹ್ಯದವ' ಎಂದು ಗುಣ ಪರಿಚಯ ಮಾಡಿಸುವುದು ಸುಲಭವಲ್ಲ.

ಸಿನಿಮಾದ ಅಂತ್ಯದ ದೃಶ್ಯವೂ ಅಷ್ಟೇ ರೋಚಕವಾಗಿದೆ. ನಿಧಿಯನ್ನು ಹೂತಿಟ್ಟ ಸ್ಮಶಾನ ಕಣ್ಣಿಗೆ ಕಂಡ ತಕ್ಷಣವೇ 'ಅಸಹ್ಯದವ'ನಿಗೆ ಸಂತೋಷದ ಹುಚ್ಚು ಹಿಡಿಯುತ್ತದೆ. ಶಿಲುಬೆಯನ್ನು ಸಿಕ್ಕಿಸಿಕೊಂಡ ಸಾವಿರಾರು ಸಮಾಧಿಗಳಲ್ಲಿ ನಿಧಿ ಹೂತಿಟ್ಟ ಸಮಾಧಿಯನ್ನು ಹುಡುಕಲು ಅವನು ಒಂದೇ ಸವನೆ ಓಡುವ ಪರಿಯಂತೂ ಟಾಲ್‌ಸ್ಟಾಯ್‌ನ 'ಮನುಷ್ಯನಿಗೆ ಎಷ್ಟು ಭೂಮಿ ಬೇಕು?' ಎನ್ನುವ ಕತೆಯನ್ನು ನೆನಪಿಸುತ್ತದೆ. ಮಾತೇ ಇಲ್ಲದ ದೃಶ್ಯದಲ್ಲಿಯೇ ಮನುಷ್ಯನ ಹಣದ ಇಂಗದ ದಾಹವನ್ನು ನಿರೂಪಿಸುವ ನಿರ್ದೇಶಕರ ಕ್ರಮ ಅವಿಸ್ಮರಣೀಯವಾಗಿದೆ.

ಒಳ್ಳೆಯ ಸಿನಿಮಾಕ್ಕೆ ಎಲ್ಲಾ ಕಲಾತ್ಮಕ ಸಂಗತಿಗಳೂ ಕೂಡಿ ಬಂದಿರುತ್ತವೆ. ಈ ಸಿನಿಮಾದ ಸಂಗೀತವೂ ಅಷ್ಟೇ ಅದ್ಭುತವಾಗಿದೆ. ಸಿನಿಮಾದ 'ಸಾರ ಸಂಗೀತ'(Theme Tune)ವನ್ನಂತೂ ನೀವು ಖಂಡಿತಾ ಕೇಳಿರುತ್ತೀರಿ (ಸಿನಿಮಾ ನೋಡದಿದ್ದರೂ ಅದನ್ನು ನೀವು ತಪ್ಪಿಸಿಕೊಂಡಿರಲು ಸಾಧ್ಯವಿಲ್ಲ). ಕಾಡಿನ ತೋಳವೊಂದು ಊಳಿಡುವ ಧ್ವನಿಯನ್ನು ಸೇರಿಸಿಕೊಂಡು ಮಾಡಿರುವ ಈ ಸಾರ ಸಂಗೀತ ಸಿನಿಮಾ ಮುಗಿದ ನಂತರವೂ ನಿಮ್ಮನ್ನು ಕಾಡುತ್ತದೆ. ಇಡೀ ಮೂರೂವರೆ ತಾಸು ನಮ್ಮನ್ನು ಹಿಡಿದಿಟ್ಟುಕೊಳ್ಳುವುದು ಕತೆಯೋ ಅಥವಾ ಅದರ ಸಂಗೀತವೋ ಎಂದು ಗೊಂದಲವಾಗುವಷ್ಟು ಹಿನ್ನಲೆ ಗಾಯನ ನಮ್ಮನ್ನು ಆವರಿಸುತ್ತದೆ.